ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಪಶುವೈದ್ಯಕೀಯ ಮಹಾವಿದ್ಯಾಲಯ, ನಂದಿನಗರ ಬೀದರ

ವಿಶ್ವಬ್ಯಾಂಕ್ ಅನುದಾನಿತ ಸುಜಲಾ-IIIರ ಅಡಿ "ಜಾನುವಾರು ಆಧಾರಿತ ವಿಸ್ತರಣಾ ಚಟುವಟಿಕೆಗಳು"

# ಉಸ್ಮಾನಾಬಾದಿ ಮೇಕೆ

ಮೇಕೆ ಸಾಕಾಣಿಕೆ ರೈತರಿಗೆ ಒಂದು ವರದಾನ. ಅಸ್ಥಿರ ಕೃಷಿಯಿಂದಾಗಿ ಜರ್ಝರಿತಗೊಂಡ ರೈತನ ಬದುಕಿಗಿದು ಸಂಜೀವಿನಿ. ಭೂಹಿಡುವಳಿ ಬೇಕೆನ್ನುವ ಕಸುಬು ಇದಲ್ಲ. ವಿದ್ಯಾಭ್ಯಾಸ, ಕೌಶಲ್ಯ ನೈಪುಣ್ಯತೆ ಅಥವಾ ಹೆಚ್ಚಿನ ಬಂಡವಾಳವನ್ನೂ ಬೇಡದು. ಆದ್ದರಿಂದ ಇದನ್ನು ಮೇಲು-ಕೀಳು, ಬಡವ-ಬಲ್ಲಿದ, ಸ್ತ್ರೀ-ಪುರಷ ಎನ್ನದೆ ಯಾರಾದರೂ ಸುಲಭವಾಗಿ ಕೈಗೊಳ್ಳಬಹುದಾದ ಉದ್ಯೋಗ.

ಭಾರತವು, ವಿಶ್ವದಲ್ಲಿಯೇ ಅತಿ ಹೆಚ್ಚು ಮೇಕೆಗಳನ್ನು ಹೊಂದಿದ್ದು, 26 ಉತ್ಕೃಷ್ಠ ಮೇಕೆ ತಳಿಗಳಿಗೆ ತವರೂರು. ರೈತರು ಮೇಕೆಗಳನ್ನು ಮಾಂಸ, ಹಾಲು ಮತ್ತು ಉಣ್ಣೆಗಾಗಿ ಸಾಕುತ್ತಾರೆ. ಸಾಕಾಣಿಕೆ ಉದ್ದೇಶಗಳನ್ವಯ ಮೇಕೆ ತಳಿಗಳನ್ನು, ಮಾಂಸದ ತಳಿ, ಹಾಲಿನ ತಳಿ, ಉಣ್ಣೆ ತಳಿ ಮತ್ತು ಉಭಯೋದ್ದೇಶ ತಳಿಗಳೆಂದು ವಿಂಗಡಿಸಲಾಗಿದೆ. ದಕ್ಖನಿ ಪ್ರಾಂತದಲ್ಲಿ ಮಾಂಸದ ಉದ್ದೇಶಕ್ಕಾಗಿ ಉಸ್ಮಾನಾಬಾದಿ ತಳಿಯ ಮೇಕೆ ಹೆಚ್ಚು ಜನಪ್ರಿಯ.

## ತಳಿಯ ಮೂಲ

ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆ ಈ ತಳಿಯ ತವರೂರು, ಆದ್ದರಿಂದ ಈ ಹೆಸರು. ಉಸ್ಮಾನಾಬಾದ ಜಿಲ್ಲೆಯಲ್ಲದೇ, ಲಾತೂರು, ಪರಭಣಿ, ಸೊಲ್ಲಾಪುರ ಮತ್ತು ಅಹ್ಮದ್‌ನಗರ ಜಿಲ್ಲೆಗಳಲ್ಲಿಯೂ ಈ ತಳಿಯ ಮೇಕೆಗಳು ಅಧಿಕವಾಗಿ ಕಂಡುಬರುತ್ತವೆ. ಕರ್ನಾಟಕದ ಬೀದರನಲ್ಲಿಯೂ ಇವುಗಳನ್ನು ಕಾಣಬಹುದು. ಅಧಿಕ ಮಾಂಸ ಉತ್ಪಾದನೆ, ಹೆಚ್ಚು ಅವಳಿ ಮರಿಗಳ ಜನನ ಪ್ರಮಾಣ ಹಾಗೂ ಬೇಗ ವಯಸ್ಸಿಗೆ ಬರುವ ಕಾರಣಗಳಿಂದ ಸಾಕಾಣಿಕೆದಾರರು ಈ ತಳಿಗೆ ಹೆಚ್ಚು ಆದ್ಯತೆ ನೀಡುತ್ತಾರೆ.

## ತಳಿಯ ಪ್ರಮುಖ ಲಕ್ಷಣಗಳು:

ಇದೊಂದು ಮಧ್ಯಮ ಗಾತ್ರದ ತಳಿ. ಉದ್ದ ದೇಹ ಹಾಗೂ ಉದ್ದನೆಯ ಕಾಲುಗಳನ್ನು ಹೊಂದಿದೆ. ತೆಳುವಾದ ಮಧ್ಯಮ ಅಳತೆಯ ಬಾಲವಿರುತ್ತದೆ. ಎತ್ತರ ನಿಲುವಿನ ಉಸ್ಮಾನಾಬಾದಿ ಮೇಕೆಗಳು ಸಾಮಾನ್ಯವಾಗಿ ಕಪ್ಪು ಮೈಬಣ್ಣ ಹೊಂದಿರುತ್ತವೆ. ಕೊಂಬು ಮತ್ತು ಮೈಬಣ್ಣ ಆಧರಿಸಿ ಒಟ್ಟು ಐದು ಬಗೆಯ ಉಸ್ಮಾನಾಬಾದಿ ಮೇಕೆಗಳು ಕಾಣಸಿಗುತ್ತವೆ.

1. ಕೊಂಬುಗಳಿದ್ದು, ಇಡೀ ದೇಹದ ಬಣ್ಣ ಕಪ್ಪಾಗಿರುವ ಮೇಕೆಗಳು
2. ಕೊಂಬುಗಳಿದ್ದು, ಬಿಳಿ ಕಿವಿ ಹಾಗೂ ಕಪ್ಪು ಮೈಬಣ್ಣದ ಮೇಕೆಗಳು
3. ಕೊಂಬುಗಳಿಲ್ಲದ, ಕಪ್ಪು ಮೈ ಬಣ್ಣದ ಮೇಕೆಗಳು
4. ಕೊಂಬುಗಳಿಲ್ಲದ, ಬಿಳಿ ಕಿವಿಯೊಂದಿಗೆ ಕಪ್ಪು ಮೈ ಬಣ್ಣದ ಮೇಕೆಗಳು
5. ಕಂದು ಮತ್ತು ಬಿಳಿ ಚುಕ್ಕೆಗಳನ್ನು ಹೊಂದಿದ ಮೇಕೆಗಳು

ಹೆಚ್ಚಿನ ಮೇಕೆಗಳಲ್ಲಿ ಮಧ್ಯಮ ಅಳತೆಯ (20 ಸೆಂ.ಮಿ) ಜೋತು ಬಿದ್ದ ಕಿವಿಗಳ ಮೇಲೆ ಬಿಳಿ ಗುರುತುಗಳಿದ್ದು, ಕುತ್ತಿಗೆ ಮತ್ತು ಹಣೆಯ ಮೇಲೆ ಕೂಡ ಬಿಳಿ ಗುರುತು ಇರುವ ಮೇಕೆಗಳು ಕಾಣಸಿಗುತ್ತದೆ. ಶೇಕಡಾ 90ರಷ್ಟು ಹೋತಗಳಿಗೆ ಚಿಕ್ಕ ಕೊಂಬುಗಳಿದ್ದು, ಹಿಂದೆ ಬಾಗಿರುತ್ತವೆ. ಹೆಣ್ಣುಗಳಿಗೆ ಕೊಂಬುಗಳು ಇರಬಹುದು ಅಥವಾ ಇಲ್ಲದೇ ಇರಬಹುದು.

## ಉತ್ಪಾದನಾ ಕ್ಷಮತೆ

ಉಸ್ಮಾನಾಬಾದಿ ಮೇಕೆಗಳು ಚಿಕ್ಕ, ದುಂಡಗಿನ ಕೆಚ್ಚಲು, ಉದ್ದನೆಯ ಮೊಲೆತೊಟ್ಟು ಹೊಂದಿದ್ದು, ಪ್ರತಿ ಕರಾವಿನಲ್ಲಿ (120 ದಿನಗಳು) ಸರಾಸರಿ 170 ರಿಂದ 180 ಕೆ.ಜಿ ಹಾಲು ಉತ್ಪಾದಿಸುತ್ತದೆ. ಉತ್ತಮವಾಗಿ ಸಾಕಿದ ಮೇಕೆಗಳು ದಿನಂಪ್ರತಿ 3.5 ಕೆ.ಜಿಯಷ್ಟು ಹಾಲು ನೀಡಿದ ಬಗ್ಗೆ ದಾಖಲೆಗಳಿವೆ.

ಮೊದಲ ಬಾರಿ ಮರಿ ಹಾಕುವ ಸರಾಸರಿ ವಯಸ್ಸು 13–15 ತಿಂಗಳಾಗಿದ್ದು, ಹೆಚ್ಚಿನ ಸಂದರ್ಭಗಳಲ್ಲಿ ಅವಳಿ ಮರಿಗಳನ್ನು (ಕೆಲವೊಮ್ಮೆ 3 ಮರಿಗಳನ್ನು) ಹಾಕುತ್ತವೆ. ಹುಟ್ಟಿದ ಮರಿಯ ತೂಕ 2.5 ಕೆ.ಜಿ, ವಯಸ್ಕ ಹೆಣ್ಣಿನ ತೂಕ 30–35 ಕೆ.ಜಿ ಹಾಗೂ ವಯಸ್ಕ ಹೋತದ ತೂಕ 40–50 ಕೆ.ಜಿ ಗಳಿರುತ್ತದೆ.


ಉಸ್ಮಾನಾಬಾದಿ ಮೇಕೆ


ಉಸ್ಮಾನಾಬಾದಿ ಹೋತ


ಅವಳಿ ಮರಿಗಳೊಂದಿಗೆ ಉಸ್ಮಾನಾಬಾದಿ ಮೇಕೆ


ಉಸ್ಮಾನಾಬಾದಿ ಮೇಕೆ ಹಿಂಡು

ತಾಂತ್ರಿಕ ಮಾಹಿತಿ:
ಡಾ. ಸಿದ್ದಲಿಂಗಸ್ವಾಮಿ ಹಿರೇಮಠ, ಡಾ. ಪ್ರಕಾಶಕುಮಾರ ರಾಠೋಡ, ಡಾ. ಯತೀಶ ಹೆಚ್.ಎಮ್
ಸಹಾಯಕ ಪ್ರಾಧ್ಯಾಪಕರು, ಪಶುವೈದ್ಯಕೀಯ ಮಹಾವಿದ್ಯಾಲಯ ಬೀದರ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಪ್ರಧಾನ ಸಂಶೋಧಕರು,** ಕೆಡಬ್ಲ್ಯೂಡಿಪಿ–II; ಸುಜಲಾ–III ಯೋಜನೆ, ಬೀದರ ಘಟಕ,
ಪಶುವೈದ್ಯಕೀಯ ಮತ್ತು ಪಶುಸಂಗೋಪನಾ ವಿಸ್ತರಣಾ ವಿಭಾಗ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ
ದೂರವಾಣಿ : 08482–245084 ಇ–ಮೇಲ್ : vcbsujala@gmail.com